doc-398
T-P-2

(1)

R No KRNN 12 ಶ್ರೀ 11 - 11 - 1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

– For Influential Publicity –

ಸ್ಥಾಪಕರು: ಅರಮನೆ ಶಿರಸ್ತೇದಾರ್ ಎಂ. ವಿ. ಕುಪ್ಪಯ್ಯರಾವ್ ಸಂಪಾದಕರು: ಧರ್ಮಸಹಾಯವಿರತ ಎಂ. ಎಚ್. ಕೃಷ್ಣರಾವ್ 3 ಪೈಸೆ

ಕರ್ನಾಟಕದ 11 ಲಕ್ಷ ಮಕ್ಕಳು ಶಾಲೆಗೆ ಹೋಗುತಿಲ್ಲ

ಕಾಂಗ್ರೆಸ್ ವಿರುದ್ಧ ಚಳವಳಿ

ನವದೆಹಲಿ–ಆಚಾರ್ಯ ಶ್ರೀಪಾಲಿನಿಯವರು ಮತ್ತು ಕಮ್ಯೂನಿಸ್ಟೇತರ ವಿರೋಧ ಪಕ್ಷಗಳ ನಾಯಕರು, ದೇಶದಲ್ಲಿ ಕಾಂಗ್ರೆಸ್ ಆಡಳಿತ ವಿರುದ್ಧ ಚಳವಳಿಯನ್ನು ತೀವ್ರಗೊಳಿಸಲಾಗುವುದೆಂದು ಒಂದು ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು

★

ಹೀಗೆ ನಡೆಯಿತೆ !

ನವದೆಹಲಿ– ತಾ|| 4 ರಂದಿಲ್ಲಿ ಬಂಧಿನ ತಿಹಾರ್ ಜೈಲಿನಿಂದ ಬಿಡುಗಡೆಯಾದ ಒಬ್ಬ ಕಾಶ್ಮೀರಿಕನನ್ನು ಪೋಲೀಸರು ದಸ್ತಗಿರಿ ಮಾಡಿದಾಗ, ಅವನು ಪೋಲೀಸರಿಗೆ ರೂ. 50 ಕೊಡಲು, ಅವರು ರಾಜಕೀಯ ಖೈದಿಯೆಂದು ಘೋಷಿಸಲಾಯಿತೆಂದು ಜನಸಂಘದ ಉಪಾಧ್ಯಕ್ಷ ಶ್ರೀ ಕೆ. ಗುಪ್ತರು ಪತ್ರಿಕೆಯವರಿಗೆ ತಿಳಿಸಿದರು

★

ಬೀಡಿ ಕಾರ್ಮಿಕರಿಗೆ ಬೋನಸ್

ಬೆಂಗಳೂರು– ಬೀಡಿ ಕಾರ್ಮಿಕರ ಪತ್ನಿ ಮಾಲೀಕರ ಪ್ರತಿನಿಧಿಗಳು ಶ್ರೀ ಅಜೀಜ್ ಸೇಟ್‌ರೊಡನೆ ಮಾತುಕತೆ ನಡೆಸಿದರು – ಮಾಲೀಕರು ಕಾವಿ [illegible] ಈ ವರ್ಷದ ಪ್ರಥಮ 6 ತಿಂಗಳಿಗೆ ಬೋನಸ್ ಕೊಡಲು ಒಪ್ಪಿರುವುದೆಂದು ಕರ್ನಾಟಕ ಬೀಡಿ ಮಜದೂರ್ ಸಂಘದ ಕಾರ್ಯದರ್ಶಿಯವರು ಪ್ರಕಟಿಸಿರುವರು

★

ಎಣ್ಣೆ ಸೌಕರ್ಯ" ಹಣ

ಬೊಂಬಾಯಿ— ಅಂತರರಾಷ್ಟ್ರೀಯ ಹಣಕಾಸಿನ ನಿಧಿ ಸೃಷ್ಟಿಸಿರುವ "ಎಣ್ಣೆ ಸೌಕರ್ಯ" ಹಣದಿಂದ ಭಾರತವು ರೂ. 150 ಕೋಟಿ ಪಡೆದುಕೊಂಡಿದೆ.

★ ನವದೆಹಲಿ– ತಾ|| 14 ರಂದು ನೆಹ್ರೂ ರವರ ೮೫ ನೇ ವಾರ್ಷಿಕೋತ್ಸವದಂದು ಶಾಂತಿನಿಕೇತನದಲ್ಲಿ 2000 ಗುಲಾಬಿ ಸಸಿಗಳನ್ನು ನೆಡಲಾಗುವುದು

3 ಅಥವಾ 4 ಮಕ್ಕಳು ಬೇಕು

ನವದೆಹಲಿ– ಕಳೆದ 20 ವರ್ಷಗಳಿಂದ ಹಲವು ದೇಶಗಳಲ್ಲಿಯು ವ್ಯಾಪಕವಾಗಿ ಹೆಚ್ಚು ಮಂದಿ ತಂದೆತಾಯಿಗಳ 3 ಅಥವ 4 ಮಕ್ಕಳನ್ನು ಹೊಂದಲು ಇಚ್ಛಿಸುತ್ತಾರೆಂದು ವಿಶ್ವಸಂಸ್ಥೆಯ ಪತ್ರಿಕಾ ಹೇಳಿಕೆ ತಿಳಿಸುತ್ತದೆ

★

ಶಾಲೆಗೆ ಹೋಗದ ಮಕ್ಕಳು

ಬೆಂಗಳೂರು— ದೇಶಾದ್ಯಂತ ಉಚಿತ ಮತ್ತು ಖಡ್ಡಾಯ ವಿದ್ಯಾಭ್ಯಾಸಕ್ಕೆ ರಾಜ್ಯಾಂಗದಲ್ಲಿ ಸೂಚನೆ ಇದ್ದರೂ, ಕರ್ನಾಟಕದಲ್ಲಿ 14 ವರ್ಷಕ್ಕೆ ಕೆಳಗಿನ 11 ಲಕ್ಷ ಮಕ್ಕಳು ಶಾಲೆಗೆ ಹೋಗುತ್ತಿಲ್ಲವೆಂದು ರಾಜ್ಯ ವಾರ್ತೆ ಪ್ರಕಟಿಸಿದೆ.

★

2 ಲಕ್ಷ ಚದುರ ಅಡಿ ಚಪ್ಪರ

ಪಾಟ್ನಾ— ಜಯಪ್ರಕಾಶರ ಚಳುವಳಿಗೆ ವಿರುದ್ಧ ಚಳವಳಿ ಕಾರ್ಯದಲ್ಲಿ ಕಮ್ಯೂನಿಸ್ಟ್ ಪಾರ್ಟಿ ತಾ ಏರ್ಪಡಿಸಿರುವ ಮೇಳನಕ್ಕೆ 2 ಲಕ್ಷ ಚದುರ ಅಡಿ ಸ್ಥಳದಲ್ಲಿ ರಾಕ್ಷಸಾಕಾರ ಚಪ್ಪರ ನಿರ್ಮಿಸಲಾಗುತ್ತಿದೆ

●

ಸ್ವೇರಕ ಕಾರ್ಯ

ಗುಲ್ಬರ್ಗ— ಡಿಸೆಂಬರು 8 ರಿಂದ 3 ದಿನಗಳು ಇಲ್ಲಿ ನಡೆಯುವ ಕುಟುಂಬ ಯೋಜನಾ ಶಿಬಿರದಲ್ಲಿ ಟುಬಕ್ಟಮಿ ಆಪರೇಷನ್ ಚಿಕಿತ್ಸೆ ಪಡೆಯುವವರಿಗೆ ಒಂದು ಸೈಟು, ಒಂದು ಸೀರೆ, 10 ಕೆಜಿ ಅಕ್ಕಿ ಕೊಡುವಂತೆ ಯೋಜಿಸಲಾಗಿದೆ.

★

ರೌಂಡ್ ಟೇಬಲ್‌ನವರ ಕಾರ್ಯ

ಮೈಸೂರು– ರೌಂಡ್ ಟೇಬಲ್‌ನವರು 10–15 ಹ್ಯಾಂಡಿಕ್ಯಾಪ್ಡ್ ಮಕ್ಕಳನ್ನು ದತ್ತು ಪಡೆಯುವ ಮತ್ತು ಸರಸ್ವತಿಪುರಂನಲ್ಲಿ ಹಂಜನ ಮಾಧ್ಯಮಶಾಲೆಯನ್ನು ರೂ 5000 ದಿಂದ 6000 ದೊಳಗೆ ಸ್ಥಾಪಿಸಲೂ ಯೋಚಿಸಿರುವರು.

ಆಸ್ತಿ ಬಗ್ಗೆ ಘೋಷಣೆ

ಬೆಂಗಳೂರು— ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು, ಮಂತ್ರಿಗಳು, ಎಂ ಪಿ ಗಳು, ಮತ್ತು ಶಾಸಕರು, ತಮಗೆ ಹಿಂದಿದ್ದ ಮತ್ತು ಈ ಪದವಿಗಳು ದೊರೆತ ನಂತರದ ತಮ್ಮ ಆಸ್ತಿಯನ್ನು ಒಂದು ತಿಂಗಳೊಳಗೆ ಘೋಷಿಸುವಂತೆ ಸೂಚಿಸಿದೆ

●

ಸಿಕ್ಕಿಂ ಭಾರತದ್ದು

ನವದೆಹಲಿ— ಚೀಟಿಪರ ಆಡಳಿತದಲ್ಲಿ ಸಿಕ್ಕಿಂ ಭಾರತದ ಒಂದು ಭಾಗವಾಗಿತ್ತೆಂದು ಭಾರತದಲ್ಲಿ 1939 ರಿಂದ 45 ರವರೆಗೆ ಸರಕಾರದ ವಿದೇಶ ವಿಚಾರ ಕಾರ್ಯದರ್ಶಿಯರ್ ಓಲಾಫ್ ಕಾರೋ ಹೇಳಿರುವರು.

★

ಬಿಹಾರ್ ಚಳುವಳಿ ಬೆಂಬಲಕ್ಕೆ

ನವದೆಹಲಿ— ಬಿಹಾರಿನಲ್ಲಿಯ ಹೋರಾಟಕ್ಕೆ ಇತರ ರಾಜ್ಯಗಳ ಜನರು ಹೇಗೆ ಸಹಾಯ ಮಾಡಬಹುದೆಂಬುದನ್ನು ಪರಾಮರ್ಶಿಸಲು ಜಯಪ್ರಕಾಶ ನಾರಾಯಣರು ದೆಹಲಿಯಲ್ಲಿ ತಾ || 25 ಮತ್ತು 26 ರಂದು ಏರ್ಪಡಿಸಿರುವ ಸಮ್ಮೇಳನಕ್ಕೆ ಹಲವು ವಿರೋಧ ಪಕ್ಷಗಳ ನಾಯಕರು ಆಹ್ವಾನಿಸಲ್ಪಟ್ಟಿರುವರು.

★

ಹೊಸೆಯುಲ್ಪಟ್ಟ ಹುಡುಗನ ಸಾವು

ಪೂನಾ— ಕಿರ್ಕಿಯಲ್ಲಿ ಬೈಸಿಕಲ್ ಮೇಲೆ ಹೋಗುತ್ತಿದ್ದ ಒಬ್ಬ ಹುಡುಗನು ರಸ್ತೆ ಪಕ್ಕದಲ್ಲಿ 4 ಜನರು ವಾರುತ್ತಿದ್ದ ಬಳೆ ರಾಶಿ ಮೇಲೆ ಬಿದ್ದನು - ನಷ್ಟಗೊಂಡ ಅವರು ಅವನನ್ನು ತುಂಬಾ ಹೊಡೆದುದರಿಂದ ಅವನು ಸತ್ತುಹೋದನು – ಇದನ್ನು ಕಂಡ ಜನರ ಗುಂಪು 500 ಕಷ್ಟಾಗಿ ಬೀದಿ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು ; ಅಂಗಡಿಗಳನ್ನು ಮುಚ್ಚಿಸಲಾಗುತ್ತಿತ್ತು – 3 ಮಂದಿ ಬಂಧಿಸಲ್ಪಟ್ಟು ; ಕರ್ಫ್ಯೂ ಜಾರಿ ಮಾಡಲಾಗಿತ್ತು.

ಅವಿಶ್ವಾಸವಿಲ್ಲ

ನವದೆಹಲಿ— ಇಂದು ಸ್ವಾರಂಭವಾದ ಲೋಕಸಭೆಯ ಅಧಿವೇಶನದಲ್ಲಿ ವಿರೋಧ ಪಕ್ಷಗಳು ಸರಕಾರದ ಮೇಲೆ ಅವಿಶ್ವಾಸ ಸೂಚನೆ ತರಬೇಕೆಂದಿದ್ದ ಯೋಚನೆಯನ್ನು ತ್ಯಜಿಸಲಾಯಿತು.

★

ಪೋಪ್‌ರವರಿಂದ ಖಂಡನೆ

ಪೋಪ್‌ರವರು, ಸಂತತಿ ಪ್ರತಿಬಂಧಕ ನೀತಿಯನ್ನು ತೀವ್ರವಾಗಿ ಖಂಡಿಸಿ, ಶ್ರೀಮಂತ ರಾಷ್ಟ್ರಗಳು ಬಡವರ ಹುಟ್ಟುವಿಕೆಯ ಪ್ರತಿಬಂಧಿಸಿ ಹಸುವಿನ ಸಮಸ್ಯೆ ಪರಿಹಾರ ಯೋಜಿಸಿರುವರೆಂದು ಕಟುವಾಗಿ ಟೀಕಿಸಿರುವರು.

★

ಬಂಪರ್ ಬಹುಮಾನ

ಶಿವಮೊಗ್ಗ— ಭಾನುವಾರ ತೆಗೆದ ಕರ್ನಾಟಕ ಲಾಟರಿಯ ಬಂಪರ್ ಬಹುಮಾನ ರೂ 5 ಲಕ್ಷ ಶಿವಮೊಗ್ಗಾಕ್ಕೆ ದೊರೆಯಿತು

★

ಸಿಪಿಐಗೆ ಎಲ್ಲಾ ಅನುಕೂಲಗಳು

ಪಾಟ್ನಾ— ಇಂದು ಕಮ್ಯೂನಿಸ್ಟ್ ಪಾರ್ಟಿ ಏರ್ಪಡಿಸಿರುವ ಮೇಳನಕ್ಕೆ ಸರಕಾರದಿಂದ ದೊರೆಯುವ ಎಲ್ಲಾ ಸೌಕರ್ಯ ಸಿಕ್ಕಿದೆ – ಲೈಸೆನ್ಸುಗಳು ಸಂಪೂರ್ಣವಾಗಿ ಸಿಕ್ಕಿದೆ – ಇದರಲ್ಲಿ ಭಾಗವಹಿಸಲು ಪಾಟ್ನಾಕ್ಕೆ ಆಗಲೇ ಬಂದಿದ್ದು ಮತ್ತೂ ಸಕಾಲದಲ್ಲಿ ಮತ್ತೊಂಭತ್ತು ಲಕ್ಷ ಜನ ಬರುವರೆಂಬ ಅನ್ನಲಾಗುತ್ತಿದೆ.

★

ಬೆಲೆ ಏರಿಕೆ

ನವದೆಹಲಿ— ಕಳೆದ ವರ್ಷದಲ್ಲಿದ್ದದ್ದಕ್ಕಿಂತ ಬೆಲೆ ಮಟ್ಟ ಶೇಕಡ 31 ಹೆಚ್ಚಿರುವದೆಂದು ಆರ್ಥಿಕ ಸಚಿವಾಲಯದ ವಿಮರ್ಶೆ ಪ್ರಕಾರವಾಗಿದೆ.

ಮಕ್ಕಳ ದಿನಾಚರಣೆ

ಮೈಸೂರು— ಪುರಸಭೆ ಹಾಗೂ ವಿಷ್ಯಾ ಇಲಾಖೆಯ ವತಿಯಿಂದ ತಾ॥ 14 ರಂದು ಮಕ್ಕಳ ದಿನಾಚರಣೆಯನ್ನು ವೈಭವವಾಗಿ ಆಚರಿಸಲು ಶಿಶ್ಚಯಿಸಲಾಗಿದೆ — 5 ರಿಂದ 12 ವರ್ಷಗಳ ವಯೋಮಿತಿಯ ಮಕ್ಕಳಿಗೆ ತಾ॥ 13 ರಂದು ಮಧ್ಯಾಹ್ನ 3 ಘಂಟೆಗೆ ಕರ್ಜನ್ ಪಾರ್ಕ್‌ನಲ್ಲಿ, ಸ್ಥಳದಲ್ಲೆ ಚಿತ್ರ ಬರೆಯುವ ಸ್ಪರ್ಧೆ ನಡೆಸಲಾಗುತ್ತದೆ — ತಾ॥ 14 ರಂದು ಸಂಜೆ 5–30 ಕ್ಕೆ ಪುರಸಭಾ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ವರ್ಷಕೊಂದು ಹೊಸ ನಗರ

ನವದೆಹಲಿ— ಬರುವ ಶತಕಗಳಲ್ಲಿ ಭಾರತವು ಜನರ ವಾಸದ ಸಮಸ್ಯೆ ಪ್ರಶಸ್ತಿಗೆ ಪ್ರತಿವರ್ಷ 1 ಮಿಲಿಯ ಜನಸಂಖ್ಯೆಯ ಒಂದೊಂದು ಹೊಸ ಪಟ್ಟಣ ನಿರ್ಮಿಸಬೇಕಾಗುವುದೆಂದು ವಿಶ್ವಸಂಸ್ಥೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ನೈತಿಕ ಕ್ರಾಂತಿ

ಮೈಸೂರು— ಇತರ ಯಾವ ಕ್ರಾಂತಿಗಿಂತ, ದೇಶದಲ್ಲಿ ನೈತಿಕ ಕ್ರಾಂತಿಯು ಅವಶ್ಯಕವಾಗಿರುವುದೆಂದು ಶ್ರೀ ಕೆಂಗಾಲ್ ಹನುಮಂತಯ್ಯ ಎಂ.ಪಿ. ಯವರು ಕನ್ನಡ ಚಳವಳಿಗಾರರು ಏರ್ಪಡಿಸಿದ್ದ ರಾಜ್ಯೋತ್ಸವದಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು.

ದಯಾಪರ ಡಾಕ್ಟರು

ಪಾರ್ವಿಕ್‌ಸೈರಿನನಿವೃತ್ತ ಡಾಕ್ಟರು ಜಾರ್ಜ್‌ಮೆಯಿರ್ ರವರು, ತಮ್ಮ ವೈದ್ಯಕೀಯ ಜೀವಿತದಲ್ಲಿ ಹೆಚ್ಚು ಮಂದಿ ರೋಗಿಗಳನ್ನು ಅವರ ಸ್ವಯೇಚ್ಛೆಯಂತೆ, ಅವರಿಗೆ ದಯಾಪರ ಕೊಲೆ ಮಾಡಲಾಗಿದೆ ಎಂದು ಹೇಳಿರುವರು.

ಶಹಬಾಸ್

ಕಾರವಾರ— ಈ ಜಿಲ್ಲೆಯಲ್ಲಿ ಕುಡಿಯುವ ನೀರಿನ ಭಾವಿ ಇಲ್ಲದ ಗ್ರಾಮವೇ ಇಲ್ಲವೆಂದು ಜಿಲ್ಲಾಧಿಕಾರಿ ಶ್ರೀ ಮಾಲ್ವಿಯವರು ಹೇಳಿದರು.

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Quality Printing Neat Binding

Lakshminarasimha Press

Sivarampet, Mysore 1

Protect the Cow

ವುಡ್‌ಲಾಂಡ್ಸ್ 8 11 74 ರಿಂದ

ಅಮೋಘ ಪ್ರಾರಂಭ

ರಾಜೇಶ್ ಖನ್ನ, ಜೀನತ್ ಅಮಾನ್,

ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ

ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ — ಆರ್. ಡಿ. ಬರ್ಮನ್ ನಿರ್ದೇಶನ — ಶಕ್ತಿ ಸಾಮಂತ್

ದಿನ 3 ಪ್ರದರ್ಶನಗಳು

ಅ ಪೆ ರಾ 8 11 74 ರಿಂದ

ಪಾತ್ರ — ಮಹೇಂದರ್ ಸಾಂಧು ನೀಲಂ ಮೆಹ,

ಅರುಣ ಇರಾನಿ, ಶಾಸಾ ಮುರಾದ್

ಪೂಜಿ ವರ್ಣದ ಅಮೋಘ ಹಿಂದಿ ಚಿತ್ರ

ಖೂ ನ್ ಕಿ ಕೀ ಮ ತ್

ಸಂಗೀತ — ಸೋನಿಕ್ ಓಮಿ ನಿರ್ದೇಶನ — ಶಿಬು ಮಿತ,

ದಿನ 3 ಪ್ರದರ್ಶನಗಳು

SHAKTI SUDHA

A Superb Tonic

Contribute Liberally to the National Defence Fund

Edited Printed and Published by Dharmapracharanirata M S Krishna Rao (Proprietor) at the Satyavadi Press, Chamarajapuram Mysore